"ಬರಲಾ ಇನ್ನು?"

"ನಾಳೆ ಬರ್ತೀರಲ್ವಾ?"

"ಇನ್ಮೇಲೆ ದಿನಾ ಬರ್ತೀನಿ."

"ಸತ್ಯವಾಗ್ಲೂ?"

"ಪ್ರಾಮಿಸ್..."

ಫಲ್ಗುಣ ಭಾಷೆ ಕೊಡುವವನಂತೆ ಕೈ ಮುಂದೆ ಮಾಡಿದ. ಅನೈಚ್ಛಿಕವಾಗಿ ಅವಳು ತನ್ನ ಅಂಗೈ ಚಾಚಿದಳು. ಚಾಚಿದ ಕೈ ಮೇಲೆ ಅವನು ತನ್ನ ಕೈಯಿಟ್ಟು ಅಮುಕಿದ. ತಣ್ಣನೆಯ ವಾತಾವರಣದಲ್ಲಿ ಬಿಸಿಯೇರಿದಂತಾಯ್ತು. ವೈಷ್ಣವಿಯ ಹಣೆಯ ಮೇಲಿನ ಸ್ವೇದಬಿಂದುಗಳು ರಸ್ತೆ ದೀಪದ ಬೆಳಕಿನಲ್ಲಿ ಫಳಫಳನೆ ಹೊಳೆದುವು. ಫಲ್ಗುಣನ ಕೈಯಲ್ಲಿದ್ದ ಅವಳ ಕೈ ಸಣ್ಣಗೆ ಕಂಪಿಸುತ್ತಿದ್ದುದು ಅವನ ಗಮನಕ್ಕೂ ಬಂತು.

"ಚಳಿಯಾಗ್ತಿದೆಯಾ?" ಕೇಳಿದ ಫಲ್ಗುಣ.

"ಅಲ್ಲ, ಸೆಕೆ..." ಅವಳು ಕೈ ಬಿಡಿಸಿಕೊಂಡು ಸೆರಗಿನಿಂದ ಹಣೆಯ ಮೇಲಿದ್ದ ಬೆವರನ್ನು ಒತ್ತಿಕೊಂಡಳು.

"ಬರ್ತೀನಿ..." ಫಲ್ಗುಣ ಹೊರಟು ಹೋದ. ವೈಷ್ಣವಿ ಗೇಟು ಮುಚ್ಚಿ ಮನೆಗೆ ವಾಪಸಾದಳು. ಪ್ರೀತಿ ಅಂದರೆ ಇಷ್ಟು ರೋಚಕವಾಗಿರುತ್ತದೆಯಾ, ಸುತ್ತಲ ಜಗತ್ತನ್ನೇ ಮರೆಸುವಷ್ಟು? ಜೋರಾಗಿ ಜೀಕಿ ಬಿಟ್ಟ ಉಯ್ಯಾಲೆಮಣೆಯಲ್ಲಿ ಕುಳಿತವರ ಭಯಮಿಶ್ರಿತ ಸಂಭ್ರಮ, ರೋಮಾಂಚನಗಳಷ್ಟು? ತುಟಿಯಂಚಿನ ಮೃದುಹಾಸವನ್ನು ಅಲ್ಲಿಯೇ ಸ್ಥಿರವಾಗಿ ಉಳಿಯಲು ಬಿಟ್ಟು ವೈಷ್ಣವಿ ಒಳಬಂದಾಗ ರಾಯರು ಚಡಪಡಿಸುತ್ತಿದ್ದರು.

"ಥಂಡಿ ಗಾಳೀಲಿ ಇಷ್ಟು ಹೊತ್ತು ಏನ್ಮಾಡ್ತಿದ್ದಿ? ಮಾತಾಡೋದಿದ್ರೆ ಒಳಗೇ ಮಾತಾಡ್ಕೋಬಹುದಿತ್ತು."

"ಯಾರ ಹತ್ರ ಮಾತಾಡ್ತಿದ್ದೆ ನಾನು? ಪಾರಿಜಾತದ ಮರದಲ್ಲಿ ಎಷ್ಟೊಂದು ಹೂ ಬಿಟ್ಟಿದೆ ಗೊತ್ತಾ ಅಪ್ಪ? ಎಲೆಗಳೇ ಕಾಣ್ದಿದ್ದಷ್ಟು ಹೂವಿನ ತೇರು. ನೋಡ್ತಾ ನಿಂತ್ಕೊಂಡಿದ್ದೆ..."

ಪ್ರೀತಿ ಕಲಿಸುವ ಮೊದಲ ಪಾಠವೇ ಸುಳ್ಳು ಹೇಳುವುದು. ತನಗೂ ಅದು ಅನ್ವಯಿಸುವಂತಾಗುವ ದಿನಗಳು ಬಂದಿರುವುದನ್ನು ನೆನೆದು ತುಟಿಗಳೆಡೆಯ ಮೃದುಹಾಸ ಮತ್ತೊಂದೆರಡು ಇಂಚಿನಷ್ಟು ಹಿಗ್ಗಲಿಸಿತು.

★★★

ಯಾವ ಜನ್ಮದ ಮೋಹಪಾಶ ಈ ಜನುಮದಲ್ಲಿ ಫಲ್ಗುಣನನ್ನು ಈ ಮನೆಯವರೆಗೆ ಸೆಳೆದು ತಂದಿದ್ದು? ಚೋದ್ಯವೆನಿಸುತ್ತದೆ ವೈಷ್ಣವಿಗೆ. ರಾಯರು ದೊಡ್ಡ ಮೊತ್ತದ ಹಣವನ್ನು ಠೇವಣಿಯಾಗಿಟ್ಟಿದ್ದ ಬ್ಯಾಂಕಿಗೆ ಮ್ಯಾನೇಜರ್ ಆಗಿ ವರ್ಗಾವಣೆಗೊಂಡು ಬಂದವನು ಫಲ್ಗುಣ. ಠೇವಣಿಯ ಅವಧಿ ಮುಗಿದು ಅದನ್ನು ನವೀಕರಿಸಬೇಕಾದರೆ ಮನೆಯವರೆಗೆ ಬಂದು ಅದನ್ನು ಜ್ಞಾಪಿಸುವ ಪದ್ಧತಿ ಎಲ್ಲೂ ಇಲ್ಲ. ಹೆಚ್ಚೆಂದರೆ ಒಂದು ಜ್ಞಾಪನಾಪತ್ರ ಮನೆಗೆ ತಲುಪಬಹುದು. ಆದರೆ, ಸುದ್ದಿ ತಲುಪಿಸಲು ಫಲ್ಗುಣ ಖುದ್ದಾಗಿ ಬಂದಿದ್ದು ವಿಧಿ ಹೂಡಿದ ಹೂಟದ ಮೊದಲ ಹೆಜ್ಜೆ. ಅದೇ ಬಡಾವಣೆಯಲ್ಲಿ ಮನೆ ಮಾಡಿದ್ದವನು ವಾಕಿಂಗಿನ ನೆಪದಲ್ಲಿ ಇವರ ಮನೆಯ ಬಾಗಿಲು ಬಡಿದಿದ್ದ. ನಂತರ ಅವನೇ ತಿಳಿಸಿದ ಹಾಗೆ ವರ್ಷಾಂತ್ಯದಲ್ಲಿ ದೊಡ್ಡ ಮೊತ್ತದ ಒಂದು ಟಾರ್ಗೆಟ್ ತಲುಪುವ ಸನ್ನಾಹದಲ್ಲಿ ಇದ್ದುಳ್ಳವರನ್ನು ಸಂಪರ್ಕಿಸುವ ಒಳ ಉದ್ದೇಶವೂ ಅವನ